ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

**ಜಿಲ್ಲಾಧಿಕಾರಿಗಳ ಕಾರ್ಯಾಲಯ**

**(ಜಿಲ್ಲಾ ಆಡಳಿತ ಭವನ) ನವನಗರ, ಬಾಗಲಕೋಟೆ-587103**

ದೂರವಾಣಿ ಸಂಖ್ಯೆ:08354-235091/235092 ಫ್ಯಾಕ್ಸ್ ನಂ:08354-235092/235096

---

ನಂ/ಆರ್‌ಬಿ/ ಫಾರೆಸ್ಟ್/CR-02/2012-13 ದಿನಾಂಕ: 20-10-2016

ವಿಷಯ:- ಬಾಗಲಕೋಟ ಜಿಲ್ಲೆಯ ತಾಲೂಕಿನ ಬದಾಮಿ ಹಲಕುರ್ಕಿ ಗ್ರಾಮದ ರಿಸನಂ. 266 ಕ್ಷೇತ್ರ 21-03 ಎ/ಗುಂ ರಲ್ಲಿ 4.5 ಹೆಕ್ಟರ್ ಜಮೀನು ಅರಣ್ಯ ಇಲಾಖೆಗೆ ಕಂದಾಯ ಜಮೀನು ನೀಡುವ ಕುರಿತು.

ಓದು :1] ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ವಿಭಾಗ ಬೆಳಗಾವಿ ಇವರ ಪತ್ರ ಕ್ರ:ಕಾ.ಅ/ಕ.ರಾ.ಹೆ.ಅ.ಯೋ/ವಿ-ಬೆ/ ಅರಣ್ಯ/21ಎಫ್/ ಎಇಪಿ-9/2012-13/768 ದಿನಾಂಕ:15-12-2012.

2] ಈ ಕಾರ್ಯಾಲಯದ ಸಮಸಂಖ್ಯೆ ಪತ್ರ ದಿನಾಂಕ: 14-10-2014 ಹಾಗೂ ದಿನಾಂಕ: 27-08-2015

3] ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರ ಪತ್ರ ನಂ. ಪ್ರಾಆಬೆ: ಭೂಮಿ-4/ಎಲ್‌ಜಿಎಲ್/ವಿವ-38/2014-15 ದಿನಾಂಕ: 02-02-2016

4] ತಹಶೀಲ್ದಾರ, ಬದಾಮಿ ಇವರ ಪತ್ರ ನಂ.ಎಲ್‌ಎನ್‌ಡಿ:ವಿವ-561/16-17 ದಿನಾಂಕ: 02-09-2016.

-*-*-/-*-*-

ಓದು [1] ರನ್ವಯ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ವಿಭಾಗ ಬೆಳಗಾವಿ ಇವರು ತಮ್ಮ ಪತ್ರದಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2 ಹಂತ 2 ರಲ್ಲಿ ಸವದತ್ತಿ-ಕಮತಗಿ [131.30 ಕಿ.ಮೀ] ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್ [ಎಡಿಬಿ] ನೆರವಿನೊಂದಿಗ ಕೈಕೊಳ್ಳಲಾಗಿದೆ. ಈ ರಸ್ತೆಯ ಭಾಗವಾದ ಲಿಂಕ್ 21ಎಫ್ [ಪಟ್ಟದಕಲ್ಲ-ಐಹೊಳೆ- ಕಮತಗಿ] ರಸ್ತೆಯು ಅರಣ್ಯ ಪ್ರದೇಶದಲ್ಲಿ ಹಾಯ್ದು ಹೋಗುತ್ತಿದ್ದು, ರಸ್ತೆ ಅಗಲೀಕರಣಕ್ಕೆ 4.388 ಹೆಕ್ಟರ್ ಅರಣ್ಯ ಭೂಮಿಯು ಅಗತ್ಯತೆ ಇರುವುದು ಈ ಸಂಬಂಧವಾಗಿ ಈ ರಸ್ತೆಯ ನಿರ್ಮಾಣ ಕಾರ್ಯಕ್ಕೆ ಬೇಕಾಗಿರುವ 4.388 ಹೆಕ್ಟರ್ ಕಾಯ್ದಿಟ್ಟ ಭೂಮಿ ಬಿಡುಗಡೆಗಾಗಿ ಅರಣ್ಯ ಭೂಮಿಯ ಎರಡರಷ್ಟು ಅಂದರೆ ಸುಮಾರು 9 ಹೆಕ್ಟರ್ ಕಂದಾಯ ಭೂಮಿಯನ್ನು ಗುರುತಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲು ವಿನಂತಿಸಿರುತ್ತಾರೆ.

ಮುಖ್ಯ ಯೋಜನಾಧಿಕಾರಿಗಳು, ಬೆಂಗಳೂರು ಇವರು ತಮ್ಮ ಅರೆ ಸರ್ಕಾರಿ ಪತ್ರ ದಿನಾಂಕ: 16-07-2013 ರಂದು ಅರೆ ಸರ್ಕಾರಿ ಪತ್ರದಲ್ಲಿ ಅರಣ್ಯ ಭೂಮಿಗೆ ಸಮಾನಾಂತರ ವಿಸ್ತೀರ್ಣದ ಅರಣ್ಯೇತರ ಜಮೀನನ್ನು ಬಿಡುಗಡೆಗೊಳಿಸಿದರೆ ಸಾಕಾಗುವದರಿಂದ 4.5 ಹೆಕ್ಟರ್ ವಿಸ್ತೀರ್ಣದ ಅರಣ್ಯೇತರ ಜಮೀನನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಕೋರಿರುವಂತೆ ಓದು [2] ರನ್ವಯ ಉಪವಿಭಾಗಾಧಿಕಾರಿಗಳು, ಬಾಗಲಕೋಟ ಇವರ ವರದಿ ಆಧರಿಸಿ ಬದಾಮಿ ತಾಲ್ಲೂಕಿನ ಹಲಕುರ್ಕಿ ಗ್ರಾಮದ ರಿಸನಂ. 266 ರ ಒಟ್ಟು ಕ್ಷೇತ್ರ 21-03 ಎ/ಗುಂ ಸರ್ಕಾರಿ ಪಡ ಜಮೀನು ಇದ್ದು ದಿನಾಂಕ: 12-07-1935 ರಂತೆ ಡ ನಂಬರ 55 ರಡಿ ರಚಿತವಾಗಿ ಇದರಲ್ಲಿ ಸರ್ಕಾರಿ ಪಡಾ ಅಂತಾ ಅಂದಿನಿಂದ ಇಂದಿನವರೆಗೆ ದಾಖಲಾಗಿರುತ್ತದೆ. ಡ ನಂಬರ 138 ರ ಪ್ರಕಾರ ದಿನಾಂಕ: 09-10-1949 ರಂದು ರಿಸನಂ. 7 ಅಂತಾ ಇದ್ದು ಮುಂದೆ ದಿನಾಂಕ: 07-07-1970 ರಂದು ಡ ನಂಬರ 4160 ರಚಿತವಾಗಿ ಅದರಲ್ಲಿ ಮೈಸೂರ ಸರ್ಕಾರದ ನೋಟಿಫಿಕೇಶನ್ ಆರ್‌ಬಿ 37 ಎಲ್ ಆರ್ ಡಿ 60 ದಿನಾಂಕ: 27-08-1965 ರ ಪ್ರಕಾರ ಸದರಿ ಹಳೆಯ ಸರ್ವೆ ನಂಬರ 7 ದನ್ನು ಹಲಕುರ್ಕಿ ಗ್ರಾಮದ ಹೊಸ ಸರ್ವೆ ನಂಬರ 266 ಅಂತಾ ದಾಖಲ ಆಗಿರುತ್ತದೆ. ಡ ನಂಬರ 138 ರ ಪ್ರಕಾರ ದನ ಕರುಗಳಿಗೆ ಮೇಯಿಸುವ ಸಲುವಾಗಿ ರಿಜರ್ವ ಮಾಡಲಿಕ್ಕೆ ಇತರ ಹಕ್ಕಿನಲ್ಲಿ ದಾಖಲಾಗಿದೆ. ಕಬ್ಜೆದಾರರ ಕಾಲಂನಲ್ಲಿ ಈಗಲೂ ಸರ್ಕಾರಿ ಪಡಾ ಅಂತಾ ಇರುವುದು ಸದರಿ ಜಮೀನು ಮೂಲತ ಸರ್ಕಾರಿ ಪಡಾ ಇರುವುದರಿಂದ ಈ ಜಮೀನು ಗುಡ್ಡಗಾಡದಿಂದ ಕೂಡಿದ್ದು ಇನ್ಯಾವುದೇ ಉದ್ದೇಶಕಗಳಿಗೆ ಅವಶ್ಯಕತೆ ಇಲ್ಲವಾದ್ದರಿಂದ 'ಬ' ವರ್ಗಕ್ಕೆ ಸೇರಿದ್ದು ಇರುವುದರಿಂದ ಇದರಲ್ಲಿ 4.5 ಹೆಕ್ಟರ್ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಪ್ರಸ್ತಾವನೆಯನ್ನು ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಸಲ್ಲಿಸಲಾಗಿತ್ತು.

Land

ಸಂಬಂಧಿಸಿದ ಶಿರಸ್ತೇದಾರ್ ಲಗತ್ತಿಸಿ -

914

ಬಾಗಲಕೋಟ

22/10/16

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬಾಗಲಕೋಟೆರವರ ಕಾರ್ಯಾಲಯ,
ಬಾಗಲಕೋಟೆ,
ಆವಕ ಕ್ರಮಾಂಕ: 2933
ದಿನಾಂಕ: 26/10/2016
ವಿಷಯ: Land

ಈ ಜಮೀನಿನ ಚೆಕ್ ಬಂದಿ ಈ ಕೆಳಗಿನಂತೆ ಇರುತ್ತದೆ.

| | |
|---|---|
| ಪೂರ್ವಕ್ಕೆ | ಬೇಡರ ಬೂದಿಹಾಳ ಗ್ರಾಮದ ಗಡಿ |
| ಪಶ್ಚಿಮಕ್ಕೆ | ಇದೇ ಸನಂದಲ್ಲಿ ಉಳಿದ ಜಮೀನು |
| ಉತ್ತರಕ್ಕೆ | ಲಾಗು ಸನಂ 265 ರ ಜಮೀನು |
| ದಕ್ಷಿಣಕ್ಕೆ | ಲಾಗು ಸನಂ:267 ರ ಜಮೀನು |

ಓದು [3] ರನ್ವಯ ಬಾಗಲಕೋಟ ಜಿಲ್ಲೆ ಬದಾಮಿ ತಾಲ್ಲೂಕಿನ ಹಲಕುರ್ಕಿ ಗ್ರಾಮದ ರಿಸನಂ. 266 ರ ಕ್ಷೇತ್ರ 21-03 ಎ/ಗುಂ ನೇದ್ದರ ಪೈಕಿ 11-05 ಎ/ಗುಂ ಜಮೀನನ್ನು ಅರಣ್ಯೀಕರಣಕ್ಕಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಇವರ ಪರವಾಗಿ ಅರಣ್ಯ ಇಲಾಖೆ ನೆಟ್ ಪ್ರಸೆಂಟ್ ವ್ಯಾಲ್ಯೂ ಪಾವತಿಸಲು ಷರತ್ತಿಗೊಳಪಟ್ಟು ಅರಣ್ಯ ಇಲಾಖೆಗೆ ವರ್ಗಾಯಿಸಲು ಸರ್ಕಾರದ ಪೂರ್ವಾನುಮೋದನೆ ನೀಡಲಾಗಿದೆ. ಅಂತಾ ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ [ಭೂ ಮಂಜೂರಾತಿ-3] ಬೆಂಗಳೂರು ಇವರ ಪತ್ರ ನಂ. ಆರ್‌ಡಿ:48: ಎಲ್‌ಜಿಜೆ/2015 ದಿನಾಂಕ: 18-01-2016 ರ ಪತ್ರದಲ್ಲಿನ ನಿರ್ದೇಶನದನ್ವಯ ನಿಯಮಾನುಸಾರ ಮುಂದಿನ ಅಗತ್ಯ ಕ್ರಮ ಜರುಗಿಸಲು ತಿಳಿಸಿರುವರು.

ಓದು [4] ರನ್ವಯ ತಹಶೀಲ್ದಾರ, ಬದಾಮಿ ಇವರು ಸದರಿ ಜಮೀನಿನ ನೆಟ್ ಪ್ರಸೆಂಟ್ ವ್ಯಾಲ್ಯೂ [ ಮಾರುಕಟ್ಟೆ ಬೆಲೆ ] ರೂ. 5,78,600-00 ಗಳನ್ನು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಬೆಳಗಾವಿ ಇವರಿಂದ ಚೆಕ್ ಮುಖಾಂತರ ಸಂದಾಯವಾದ ಮೊತ್ತವನ್ನು ಖಜಾನೆ ಕೋಡ ನಂಬರ 29066717 ಲೆಕ್ಕ ಶೀರ್ಷಿಕೆ ಕೋಡ ನಂ. 002900101001 ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬದಾಮಿ ಚಲನ ನಂ. 042 ದಿನಾಂಕ: 01-09-2016 ರಂದು ಭರಣಾ ಮಾಡಿ ಚಲನ ಪ್ರತಿಯೊಂದಿಗೆ ವರದಿ ಸಲ್ಲಿಸಿರುತ್ತಾರೆ.

ಓದು [3] ರನ್ವಯ ಸರ್ಕಾರದ ಪತ್ರ ದಿನಾಂಕ: 18-01-2016 ರಲ್ಲಿ ವಿಧಿಸಿರುವ ಷರತ್ತುಗೊಳಪಡಿಸಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -: ಆದೇಶ :-

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2, ಹಂತ-2 ರಲ್ಲಿ ಸವದತ್ತಿ-ಕಮತಗಿ [ 131.30 ಕಿ.ಮೀ ] ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್ [ ಎಡಿಬಿ ] ನೆರವಿನೊಂದಿಗೆ ಕೈಗೊಳ್ಳಲಾಗಿರುವ ಲಿಂಕ್ 21ಎಫ್ [ ಪಟ್ಟದಕಲ್ಲು-ಐಹೊಳೆ-ಕಮತಗಿ ] ರಸ್ತೆ ಅಗಲೀಕರಣಕ್ಕಾಗಿ 4.388 ಹೆಕ್ಟರ್ ಭೂಮಿಯ ಪರ್ಯಾಯವಾಗಿ ಬದಾಮಿ ತಾಲ್ಲೂಕಿನ ಹಲಕುರ್ಕಿ ಗ್ರಾಮದ ರಿಸನಂ. 266 ರ ಕ್ಷೇತ್ರ 21-03 ಎ/ಗುಂ ಪೈಕಿ 11-05 ಎ/ಗುಂ ಜಮೀನನ್ನು ಅರಣ್ಯೀಕರಣಕ್ಕಾಗಿ ಈ ಕೆಳಕಂಡ ಷರತ್ತಿಗೊಳಪಟ್ಟು ಅರಣ್ಯ ಇಲಾಖೆಗೆ ವರ್ಗಾಯಿಸಿ ಆದೇಶಿಸಿದೆ.

**ಷರತ್ತುಗಳು:**

1. ವರ್ಗಾವಣೆ ಪಡೆದ ಇಲಾಖೆಗೆ ವರ್ಗಾಯಿಸಿದ ಜಮೀನಿನ ಅವಶ್ಯಕತೆ ಇಲ್ಲದೇ ಇದ್ದಲ್ಲಿ ಮರಳಿ ಕಂದಾಯ ಇಲಾಖೆಗೆ ವಾಪಸ್ಸು ಮಾಡತಕ್ಕದ್ದು.
2. ವರ್ಗಾವಣೆಯಾದ ಜಮೀನನ್ನು ಅರಣ್ಯ ಇಲಾಖೆಯು ನೆಡುತೋಪು ಬೆಳಸುವ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
3. ಯಾವುದೇ ರೀತಿ ಒತ್ತುವರಿಯಾಗದಂತೆ ಮತ್ತು ತಂತಿ ಬೇಲಿ ಹಾಕಿಕೊಳ್ಳತಕ್ಕದ್ದು.

ಸಹಿ/-

[ ಪಿ.ಎ.ಮೇಘಣ್ಣವರ ]

ಜಿಲ್ಲಾಧಿಕಾರಿಗಳು,ಬಾಗಲಕೋಟ

DEPUTY COMMIS

ಪ್ರತಿಗಳು:

1] ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು ಇವರಿಗೆ ಮಾಹಿತಿ ಕುರಿತು ಆದರಪೂರ್ವಕವಾಗಿ ಸಲ್ಲಿಸಿದೆ.

2] ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಮಾಹಿತಿ ಕುರಿತು ಆದರಪೂರ್ವಕವಾಗಿ ಸಲ್ಲಿಸಿದೆ.

3] ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಾಗಲಕೋಟ ವಿಭಾಗ, ಬಾಗಲಕೋಟ ಇವರಿಗೆ ಮಾಹಿತಿ ಕುರಿತು ರವಾನೆ.

4] ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಬೆಳಗಾವಿ ಇವರಿಗೆ ಮಾಹಿತಿ ಕುರಿತು ರವಾನೆ.

5] ಉಪವಿಭಾಗಾಧಿಕಾರಿಗಳು, ಬಾಗಲಕೋಟ ಇವರಿಗೆ ಮಾಹಿತಿ ಕುರಿತು ರವಾನೆ.

6] ತಹಶೀಲ್ದಾರ, ಹುನಗುಂದ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನೆ.

7] ತಹಶೀಲ್ದಾರ, ಬದಾಮಿ ಇವರಿಗೆ ಮಾಹಿತಿ ಹಾಗೂ ಪ್ರಸ್ತಾಪಿತ ಜಮೀನಿನ ಕಬ್ಜಾಕೊಟ್ಟು ಕಬ್ಜಾ ಪಾವತಿಯೊಂದಿಗೆ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಲು ತಿಳಿಸಿದೆ.

ಜಿಲ್ಲಾಧಿಕಾರಿಗಳು, ಬಾಗಲಕೋಟ
ಇವರ ಪರವಾಗಿ